ಮೇಲಿರಿಸಿ ಸೋಫಾದ ಮೇಲೆ ಕುಳಿತುಕೊಂಡಳು.

"ನಿನ್ನೆ ರಾತ್ರಿ ಏನು ಮಾಡಿದೆ ಡಿಯರ್?" ಅವಳು ವಿಚಾರಿಸಿದಳು.

"ಬಹಳ ಹೊತ್ತು ಕ್ಲಿನಿಕಿನಲ್ಲೇ ಇದ್ದೆ. ಕೆಲವು ಹಲ್ಲು ಸೆಟ್ಟುಗಳನ್ನು ಮಾಡುವುದಿತ್ತು. ನಂತರ ಅಕೌಂಟ್ಸನ್ನೆಲ್ಲಾ ಅಪ್ ಟು ಡೇಟ್ ಮಾಡಿ ಮುಗಿಸಿದೆ."

"ಹಲ್ಲು ಸೆಟ್ಟುಗಳನ್ನು ಮಾಡುವ ಶ್ರಮದಾಯಕ ಕೆಲಸಗಳನ್ನು ನೀನು ಏಕೆ ಮಾಡುತ್ತೀಯ ಎಂದು ನನಗೆ ಅರ್ಥವಾಗುತ್ತಿಲ್ಲ ಸಿರಿಲ್. ಆ ಕೆಲಸಕ್ಕೆಂದೇ ಒಬ್ಬನಿದ್ದಾನೆ ತಾನೆ?" ಅವಳು ಸಿಡಿಮಿಡಿಗೊಂಡು ಕೇಳಿದಳು.

"ಇದ್ದಾನೆ. ಆದರೂ ಕೆಲವು ವಿಶೇಷ ಪೇಶೆಂಟುಗಳ ಸೆಟ್ಟುಗಳನ್ನು ನಾನೇ ಮಾಡಿದಾಗ ತೃಪ್ತಿ ಸಿಗುತ್ತದೆ."

"ಆದರೂ ಡಿಯರ್... ರಾತ್ರಿಯೆಲ್ಲಾ ನಿದ್ದೆ ಕಳಕೊಂಡು... ಆರೋಗ್ಯದ ಕಡೆಗೂ ಗಮನ ಕೊಡಬೇಕಲ್ವೇ? ಲೆಕ್ಕ–ಪತ್ರಗಳನ್ನು ಬರೆದಿಡಲು ನಿನ್ನ ಆ ವಯ್ಯಾರಿ ಸೆಕ್ರೆಟರಿ ಇದ್ದಾಳಲ್ಲ? ಡೆಸ್ಕ್ ಮುಂದೆ ಕೂತು ಹಲ್ಲು ಕಿರಿಯುವ ಕೆಲಸ ಬಿಟ್ಟರೆ ಅವಳಿಗೆ ಬೇರೆ ಏನು ಕೆಲಸವಿದೆ?" ಸಹಜವಾಗಿ ಮಿಸೆಸ್ ಬ್ರಿಗ್ಸಳಿಗೆ ಸಿರಿಲನ ಯೌವನ ಹೊರಸೂಸುವ ಸೆಕ್ರೆಟರಿಯ ಮೇಲೆ ಚಾರಿತ್ರಿಕ ಸಿಟ್ಟಿತ್ತು.

"ಸಾಮಾನ್ಯವಾಗಿ ಅದನ್ನೆಲ್ಲಾ ಅವಳೇ ಮಾಡೋದು ಡಾರ್ಲಿಂಗ್. ಆದರೆ, ಕೆಲವರ ಫೀಜು, ಬಡವರು ಶ್ರೀಮಂತರಾರೆಂದು ತೀರ್ಮಾನಿಸಿ ನಿರ್ಧರಿಸುವುದು ನಾನೇ..."

"ನೀನು ತಯಾರಿಸಿದ ಮಾರ್ಟಿನಿ ತುಂಬಾ ಚೆನ್ನಾಗಿತ್ತು ಡಿಯರ್, ಥ್ಯಾಂಕ್ಸ್." ಗ್ಲಾಸನ್ನು ಟೀಪಾಯ್ ಮೇಲಿಟ್ಟು ಅವಳು ಕರ್ಚೀಫು ತೆಗೆಯುವವಳಂತೆ ಹ್ಯಾಂಡ್ ಬ್ಯಾಗನ್ನು ತೆರೆದಳು. ಸೋಜಿಗಪಟ್ಟವಳಂತೆ ನಟಿಸುತ್ತಾ, "ಓಹ್, ಸಿರಿಲ್ ಡಿಯರ್, ಇಲ್ನೋಡು! ನಾನು ಕುಳಿತಿದ್ದ ಟ್ಯಾಕ್ಸಿಯ ಸೀಟಿನ ಬದಿಯಲ್ಲಿ ಇದೊಂದು ರಸೀದಿ ಬಿದ್ದಿತ್ತು. ಅದರ ಮೇಲೆ ಒಂದು ನಂಬರೂ ಇದೆ. ಲಾಟರಿ ಟಿಕೆಟೊ ಏನೋ? ಪಾಪ ಯಾರೋ ಬಿಟ್ಟು ಹೋಗಿದ್ದಾರೆ! ಇರಲಿ ಅಂತ ಬ್ಯಾಗಲ್ಲಿ ಹಾಕ್ಕೊಂಡು ಬಂದೆ." ಎನ್ನುತ್ತಾ ರಸೀದಿಯನ್ನು ಗಂಡನ ಕೈಗೆ ಕೊಟ್ಟಳು. ಅವನು ಅದನ್ನು ತೆಗೆದುಕೊಂಡು ಬೆಳಕಿಗೆ ಹಿಡಿದು ಹುಳುಕು ಹಲ್ಲನ್ನು ಪರೀಕ್ಷಿಸಿದಂತೆ ವಿವಿಧ ಕೋನಗಳಿಂದ ನೋಡಿದ.

"ಇದು ಲಾಟರಿ ಟಿಕೆಟು ಅಲ್ಲ ಡಿಯರ್! ಏನೋ ಗಿರವಿ ಇಟ್ಟ ವಸ್ತುವಿನ ರಸೀದಿ!"

"ಗಿರವಿ ಇಟ್ಟಿರುವುದಾ?" ಅವಳ ಕಣ್ಣುಗಳು ಅಗಲವಾದವು.

"ಹೌದು ಕಣಮ್ಮ. ನೋಡಿಲ್ಲಿ... ಅಂಗಡಿಯ ಹೆಸರೂ ಇದೆ."

"ಥೂ... ನಾನು ಲಾಟರಿ ಟಿಕೆಟೇ ಅಂದ್ಕೊಂಡಿದ್ದೆ!"

"ನಿರಾಶಳಾಗಬೇಡ ಡಿಯರ್. ಈ ರಸೀದಿಯೂ ಒಂದು ನಮೂನೆಯ ಲಾಟರಿ ಟಿಕೆಟ್ ಆಗಿರಬಹುದು."

"ಅದು ಹೇಗೆ?"

ಹೆಸರು, ವಿಳಾಸ ಇಲ್ಲದ ಇಂತಹ ಗಿರವಿ ರಸೀದಿಗಳ ಬಗ್ಗೆ ಸಿರಿಲ್ ಅವಳಿಗೆ ವಿವರಿಸಿದ: "ಈ ರಸೀದಿಯನ್ನು ತೋರಿಸಿ, ಅದರಲ್ಲಿ ಕಾಣಿಸಿದ ಮೊಬಲಗನ್ನು ಬಡ್ಡಿ ಸಮೇತ ಪಾವತಿಸಿ, ಯಾರು ಬೇಕಾದರೂ ಗಿರವಿ ಇಟ್ಟ ವಸ್ತುವನ್ನು ತರಬಹುದು ಡಿಯರ್!"

"ನಾವು ತರೋಣವೇ, ಸಿರಿಲ್ ಡಾರ್ಲಿಂಗ್?" ಮಿಸೆಸ್ ಬ್ರಿಗ್ಸ್‌ಳ ಮುಖ ಊರಗಲವಾಯಿತು.

"ಇಲ್ಲಿ ನಮೂದಿಸಿದ ಮೊಬಲಗನ್ನು ನೋಡಿದೆಯಾ ಡಿಯರ್? ಐವತ್ತು ಡಾಲರುಗಳು!... ಅಂದರೆ, ಗಿರವಿ ಇಟ್ಟಿರುವ ವಸ್ತುವಿನ ಬೆಲೆ ಇದಕ್ಕಿಂತ ಹತ್ತು ಪಟ್ಟಾದರೂ ಜಾಸ್ತಿ ಇರಲೇಬೇಕು!"

"ಹೌದೇನು?!!" ಮಿಸೆಸ್ ಬ್ರಿಗ್ಸ್ ಹೌಹಾರಿದಳು.